ಶ್ರೀ ಪಿ. ಮಂಜಿಯಪ್ಪ.—ಮಾನ್ಯ ಡಿ. ಟಿ. ರಾಮು ಅವರು ಎರಡು ಷರತ್ತುಗಳನ್ನು ಹೇಳಿದರು. ಅದರ ಜೊತೆಗೆ ಇನ್ನೂ ಒಂದು ಷರತ್ತು ಇದೆ. ೩ ವರ್ಷ ಕಂಟಿನ್ಯೂಯಸ್ ಆಗಿ ಮಳೆ ಆಗಿರಕೂಡದು ೬ ಆಣೆ ಪಹಣಿ ಇರಬೇಕು ಆ ಅವಧಿಯಲ್ಲಿ ಅವನು ಸಾಲ್ಯನೇ ಒಂದು ಭಾಗ ಸಾಲವನ್ನೂ ಕೂಡ ತೀರಿಸಿರ ಬೇಕು ಎಂದು ಇದೆ. ಇದು ಒಂದಕ್ಕೊಂದು ವಿರೋಧಾಭಾಸ ಆಗತಕ್ಕ ಸಂದರ್ಭ ಬರುತ್ತದೆ. ಆದುದರಿಂದ ತಾವು ಕೊಡತಕ್ಕಂಥ ಪರಿಹಾರವನ್ನು ರೆಟ್ರಾಸ್ಪೆಕ್ಟೀವಾಗಿ ಮಾಡಿದರೆ ಕಷ್ಟವಾಗುತ್ತದೆ. ಪ್ರಾಸ್ಪೆಕ್ಟೀವಾಗಿ ಮಾಡಿ, ಬೇರೆ ಬೇರೆ ನಾರ್ಮ್ಸ್ ಫಿಕ್ಸ್ ಮಾಡುವುದನ್ನು ಪುನರ್ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—೨೫ ಪರ್ಸೆಂಟ್ ಸಾಲ ಪಾಪಸ್ ಕೊಟ್ಟಿದ್ದರೆ ಅರ್ಜಿಯನ್ನು ಪರಿಶೀಲನೆಮಾಡುತ್ತೇವೆಂದು ಸರ್ಕಾರ ಷರತ್ತು ಹಾಕಿರತಕ್ಕಂಥಾದ್ದು ಆ ಸಾಲಗಾರರಿಗೆ ಅನುಕೂಲ ವಾಗಲಿ ಎಂದು. ಯಾವುದೇ ೩ ವರ್ಷಗಳಲ್ಲಿ ೨೫ ಪರ್ಸೆಂಟ್ ಸಾಲ ಕೊಟ್ಟಿದ್ದರೂ ಸಾಲ ತೀರಿಸಬೇಕು ಎನ್ನುವ ಮನೋಭಾವದಿಂದ ಕೊಟ್ಟಿದ್ದಾನೆಂದು ಪರಿಗಣಿಸುತ್ತೆವೆಯೇ ಹೊರತು ಅದಕ್ಕೆ ತದ್ವಿರುದ್ದವಾಗಿ ಅಲ್ಲ. ಸಾಲಗಾರರಿಗೆ ಅನುಕೂಲವಾಗಲಿ ಎಂದು ಷರತ್ತನ್ನು ಹಾಕಿದ್ದೇವೆ.

ಶ್ರೀ ಗಟ್ಟಿ ಚಂದ್ರಶೇಖರ್.— ೧೫ ಲಕ್ಷ ರೂಪಾಯಿ ತುಮಕೂರಿನಲ್ಲಿ ಕೊಟ್ಟಿದ್ದಾರೆಂದು ಹೇಳಿದರು. ರೈತರು ಅರ್ಜಿಗಳನ್ನು ಹಾಕಿದ್ದಾರೆ. ಆ ಅರ್ಜಿಗಳನ್ನು ಪರಿಶೀಲನೆಮಾಡಿ ರಿಲ್ಯಾಕ್ಸ್ ಮಾಡುತ್ತೀರೋ ಹೇಗೆ. ಇನ್ನು ಮುಂದಾದರೂ ಸಪ ಸಾಲ ವಜಾ ಮಾಡುತ್ತೇವೆಂದು ಹುಚ್ಚಿ ಹಿಡಿಸುವಂಥ ಕೆಲಸವನ್ನು ಮಾಡುತ್ತೀರೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಹುಚ್ಚು ಹಿಡಿಸಿದಂಥಾದ್ದು ಸರ್ಕಾರ ಅಲ್ಲ, ನಮ್ಮ ಮಧ್ಯವರ್ತಿ ಜನ ಹುಚ್ಚು ಹಿಡಿಸಿದ್ದು. ಸರ್ಕಾರ ಸರಿಯಾಗಿ ಹೋಗುತ್ತಾ ಇದ್ದು, ಏನಾಯಿತಿಗೆ ಸರ್ಕಾರಣಗಳನ್ನು ಕೊಟ್ಟಿತ್ತು. ಮಧ್ಯವರ್ತಿ ಜನ ಭ್ರಾಂತಿ ಹುಟ್ಟಿಸಿ ಹಣವನ್ನು ಖರ್ಚುಮಾಡಿಸಿದರು.

ಶ್ರೀ ಎಸ್. ಲಿಂಗಯ್ಯ.—ಷರತ್ತಿಗೆ ತಾವು ಒಳಪಡಿಸಬಾರದು. ಆ ಷರತ್ತನ್ನು ಕೈಬಿಟ್ಟು ಬೇರೆ ಮಾನದಂಡದಿಂದ ಆಳತೆ ಮಾಡಬೇಕು. ಈಗ ಏನು ತಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ ಅದಕ್ಕೆ ಯಾರು ಯೋಗ್ಯರಿದ್ದಾರೆ ಅವರ ಬಗ್ಗೆ ಬೇರೆ ಮಾನದಂಡದಿಂದ ಆಳೆಯಬೇಕು ಎನ್ನುವುದು ನನ್ನ ಮನವಿ. ಕೊಡುವುದಕ್ಕೆ ಅಶಕ್ತರಾಗಿದ್ದು ತೀರಿಸಬಲ್ಲ ಶಕ್ತಿ ಇಲ್ಲದವರಿಗೆ ಬಡ್ಡಿ, ಸುಸ್ತಿ ಬಡ್ಡಿ ವಜಾ ಮಾಡುವುದನ್ನು ತಾವು ಪರಿಶೀಲನೆ ಮಾಡುತ್ತೀರಾ, ಆಮೇಲೆ ರಾಜ್ಯಾದ್ಯಂತ ತೆಗೆದುಕೊಂಡಿರತಕ್ಕ ಎಲ್ಲಾ ಸಾಲಗಾರರಿಗೂ ಸುಸ್ತಿ ಬಡ್ಡಿಯನ್ನು ವಜಾ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

Seepage of water in atchkat area of Hemavathy Right Bank Canal in Arakalgud Taluk.

67 SRI K. B. MALLAPPA (Arakalgud) Will the Minister of State for Major and Medium Irrigation be pleased to state.—

(a) whether it is a fact that the villagers of Anniganahally, Haradur, Ganganalu and Uppara Koppal in Kasba Hobli, Arakalgud are facing hardship due to seepage water in atchkat area of Hemavathy Right Bank Canal ;

(b) whether the people of these villages have represented to the Government to shift these villages;

(c) if so, the action taken by the Government :

SRI B.B. CHIMMANAKATTI.-(Minister of State for Major and Medium Irrigation.—)

(a) Yes.

(b) Yes.

(c) Field datas are being collected with the help of ground water Survey Department. Alternative proposal such as creation of dry belt around the village is being examined.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, (ಇ) ಪಶ್ನೆಗೆ ಉತ್ತರವಾಗಿ, ಅಂತರ್ಜಲ ಸಮೀಕ್ಷೆ ಇಲಾಖೆಯವರ ಸಹಾಯದಿಂದ ಕ್ಷೇತ್ರ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಗ್ರಾಮದ ಸುತ್ತಾ ಒಣವಲಯವನ್ನು ನಿರ್ಮಿಸುವ ಪ್ರತ್ಯಾಯ ಸಲಹೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದಾರೆ. ನಾನು ಈ ಪ್ರಶ್ನೆ ಏಕೆ ಕೇಳಿದೆ ಎಂದು ಅರ್ಥಮಾಡಿಕೊಂಡಿಲ್ಲ. ಈ ವಿಚಾರವನ್ನು ರಿಹ್ಯಾಬಿಲಿಟೇಷನ್ ಕಮಿಟಿಯಲ್ಲಿ ತಂದಾಗ ಈ ಸ್ಥಳವನ್ನು ಬದಲಾಯಿಸಬೇಕು. ಸೀಪೇಜ್ ವಾಟರ್ ಬರುತ್ತಾ ಇದೆ ಎಂದು ಹೇಳಿ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಮನಗಂಡ ಮೇಲೆ ಒಂದು ಸಬ್ ಕಮಿಟಿ ಮಾಡಿದರು ಆ ಸಬ್ ಕಮಿಟಿ ಮಾಡಿದಮೇಲೆ ಅವರು ಹೋಗಿ ಇನ್ಸ್‌ಪೆಕ್ಟ್ ಮಾಡಿ ಅದರ ಸಾಧ್ಯತೆಯನ್ನು ಪರಿಶೀಲಿಸಿ ಹಳ್ಳಿಗಳನ್ನು ಶಿಫ್ಟ್ ಮಾಡಬಾರದು ಎಂಬುದಾಗಿ ರಿಪೋರ್ಟ್ ಕೊಡಬೇಕು ಎಂದು ಹೇಳಿದರು. ಮತ್ತೆ ನಾನು ಡಿ. ಹೆಚ್. ಒ. ಹೆಲ್ತ್ ಆಫೀಸರ್, ಎಕ್ಸ್‌ಕ್ಯೂಟೀವ್ ಇಂಜನಿಯರ್, ಎಲ್ಲಾ ಸೇರಿ ಸಬ್ ಕಮಿಟಿಯಲ್ಲಿ ಇನ್ಸ್‌ಪೆಕ್ಟ್ ಮಾಡಿ ಮಲೇರಿಯ ಜಾಸ್ತಿಯಾಗುತ್ತದೆ, ಈ ಊರಿನ ಜನಗಳಿಗೆ ಹಾನಿಯಾಗುತ್ತಾ ಇದೆ, ಪ್ರತಿ ಹಳ್ಳಿಯಲ್ಲೂ ಕೊಳೆಯುತ್ತಾ, ಸಾಯುತ್ತಾ ಇದ್ದಾರೆ, ಆದುದರಿಂದ ಇದನ್ನು ಶಿಫ್ಟ್ ಮಾಡಬೇಕು ಎಂದು ಹೇಳಿದ ಮೇಲೆ ಸರ್ಕಾರಕ್ಕೆ ಬರೆದಿದ್ದಾರೆ. ಈಗ ಒಣ ವಲಯ ನಿರ್ಮಿಸುವ ಬಗ್ಗೆ ಹೇಳಿರುವುದು ಸರಿಯಾದುದಲ್ಲ. ಆದುದರಿಂದ ಸರ್ಕಾರದವರು ಇದನ್ನು ಪರಿಶೀಲಿಸಿ ಹಳ್ಳಿಗಳನ್ನು ಶಿಫ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ಆ ಉದ್ದೇಶದಿಂದ ಈ ಪ್ರಶ್ನೆಯನ್ನು ಹಾಕಿದ್ದು.

ಅಧ್ಯಕ್ಷರು.—ಪ್ರಶ್ನೆಯ ಉದ್ದೇಶವನ್ನು ಹೇಳಿದಿರಿ, ಏನು ಬೇಕೋ ಕೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಹೇಮಾವತಿ ಬಲದಂಡೆ ನಾಲೆಯಿಂದ ನಮ್ಮ ತಾಲ್ಲೂಕಿನಲ್ಲಿ ಬರತಕ್ಕಂಥ ಈ ಅಚ್ಚುಕಟ್ಟು ಎಷ್ಟು, ಒಣವಲಯ ಸ್ಥಾಪನೆ ಮಾಡಿದರೆ ಈ ಅಚ್ಚುಕಟ್ಟಿನಲ್ಲಿ ಎಷ್ಟು ಕಡಮೆಯಾಗುತ್ತದೆ, ಹಳ್ಳಿಗಳಿಗೆ ಎಷ್ಟು ನಷ್ಟವಾಗುತ್ತದೆ, ಎನ್ನುವುದು ನನ್ನ ಪ್ರಶ್ನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೆ, ಇದರ ಅಚ್ಚುಕಟ್ಟು ಎಷ್ಟು ಪ್ರದೇಶ ಎನ್ನುವುದರ ಬಗ್ಗೆ ನನ್ನ ಹತ್ತಿರ ರಿಕಾರ್ಡ್ಸ್ ಇಲ್ಲ. ಮಾನ್ಯ ಸದಸ್ಯರು ರೀಹ್ಯಾಬಿಲಿಟೇಷನ್ ಕಮಿಟಿಗೆ ಸದಸ್ಯರಾಗಿದ್ದಾರೆ. ಆ ಕಮಿಟಿ ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಿರುವುದನ್ನು ಅವರು ತಮ್ಮ ಪ್ರಶ್ನೆಯಲ್ಲೇ ಹೇಳಿದ್ದಾರೆ ಈ ವಿಷಯವನ್ನು ನಮ್ಮ ತುಂಗಭದ್ರ ಅಡ್ಮಿನಿಸ್ಟ್ರೇಟರಿಗೂ ಕೂಡ ರಿಪೋರ್ ಮಾಡಿದ್ದರು, ಅವರೂ ಕೂಡ ಒಪಿನಿಯನ್ ಕೊಟ್ಟಿದ್ದಾರೆ. ಶಿಫ್ಟ್ ಮಾಡುವ ಸಲುವಾಗಿ ಕಮ್ಯಾಂಡ್ ಏರಿಯ ಕೊ ಆರ್ಡಿನೇಷನ್ ಕಮಿಟಿಯಲ್ಲೂ ಈ ವಿಷಯವನ್ನು ಚರ್ಚೆ ಮಾಡಿದ್ದಾರೆ.

ಚರ್ಚೆ ಮಾಡಿ ಅದನ್ನು ಶಿಫ್ಟ್ ಮಾಡಬಹುದು ಅಥವಾ ಆ ಸ್ಥಳದಲ್ಲಿ ಒಂದು ಡ್ರೈನೇಜ್ ಮಾಡಿ ಒಂದು ಸೀಪೇಜ್ ಕಡಿಮೆ ಮಾಡುವ ಬಗ್ಗೆ ಚರ್ಚೆ ಮಾಡಿದ್ದೇವೆ. ಡ್ರೈನೇಜ್ ಮಾಡಿದರೆ ಬಹುಶಃ ಸೀಪೇಜ್ ಕಡಿಮೆ ಮಾಡುವುದಕ್ಕೆ ಅಭಿಪ್ರಾಯವನ್ನು ಕೂಡ ಕೊಟ್ಟಿದ್ದಾರೆ ಅಥವಾ ರಿಹ್ಯಾಬಿಲಿಟೇಷನ್ ಮಾಡುವ ಬಗ್ಗೆ ಈ ತಿಂಗಳು ಅಥವಾ ಮುಂದಿನ ತಿಂಗಳು ಮೀಟಿಂಗ್ ಕರೆದು ಅದರಲ್ಲಿ ಚರ್ಚೆಯಾದ ನಂತರ ಡ್ರೈನೇಜ್ ಮಾಡತಕ್ಕ ವ್ಯವಸ್ಥೆ ಒಳ್ಳೆಯದು ಎನ್ನುವುದಾದರೆ ಅದಕ್ಕೂ ನಾವು ಸಿದ್ಧ ಇಲ್ಲವೇ ಅವರನ್ನು ಇಲ್ಲಿಂದ ಶಿಫ್ಟ್ ಮಾಡುವುದು ಒಳ್ಳೆಯದು ಎಂದರೆ ಅದನ್ನು ಮಾಡುವುದಕ್ಕೂ ಅಡ್ಡಿ ಇಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ.—ಶಿಫ್ಟ್ ಮಾಡುವುದಕ್ಕೆ ಆಲ್ಲಿ ಜಾಗವಿಲ್ಲವೆಂದು ಹೇಳುತ್ತಾರೆ. ಆ ಊರಿನ ಗೋಪಾಳದಲ್ಲಿಯೇ ಖಾಲಿ ಜಾಗವಿದೆ. ಮುಳುಗಡೆಯಾದಂಥ ಜನರಿಗೋಸ್ಕರ ಅದನ್ನು ರಿಜರ್ವ್‌ನಲ್ಲಿ ಇಟ್ಟಿದ್ದಾರೆ. ಆದುದರಿಂದ ಅಲ್ಲಿಗೆ ಶಿಫ್ಟ್ ಮಾಡಬಹುದು. ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಅಪ್ಪಣೆ ಕೊಡಿಸಬೇಕು, ಇದರ ಬಗ್ಗೆ ಸ್ಪಷ್ಟವಾದ ಭರವಸೆಯನ್ನು ಮಾನ್ಯ ಮಂತ್ರಿಗಳವರು ಕೊಟ್ಟರೆ ಒಳ್ಳೆಯದು. ೩ ವರ್ಷಗಳಿಂದಲೂ ಇದರ ಬಗ್ಗೆ ಬರೀ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರವಾಗಲೀ ಅಧಿಕಾರಿಗಳಾಗಲೀ ತೀವ್ರವಾದ ಗಮನಿಸುವುದನ್ನು ಹರಿಸಿಲ್ಲ. ಅವರು ಪ್ರತಿವರ್ಷವೂ ಮಲೇರಿಯಾದಿಂದ ನರಳುತ್ತಿದ್ದಾರೆ. ಮತ್ತೆ ಮಳೆ ಬಂದು ಮನೆಗಳು ಮಳೆಗಾಲದಲ್ಲಿ ಮತ್ತು ಈ ಸೀಪೇಜಿ ನಿಂದ ಬಿದ್ದು ಹೋಗಿವೆ. ಅವರು ಮನೆಗಳಲ್ಲಿ ವಾಸ ಮಾಡುವುದಕ್ಕಾಗುತ್ತಿಲ್ಲ. ರಾತ್ರಿ ಹೊತ್ತು ನೆಲದ ಮೇಲೆ ಮಲಗುವುದಕ್ಕಾಗುವುದಿಲ್ಲ ಆಗ ಉಡನ್ ಪ್ಲಾಂಕ್ ಹಾಕಿಕೊಳ್ಳಬೇಕು, ಊಟ ಹೂಡಬೇಕಾದರೆ, ತಿಂಡಿ ತಿನ್ನಬೇಕಾದಾಗಲೂ ಸಹ ಉಡನ್ ಪ್ಲಾಂಕ್‌ಗಳನ್ನು ಹಾಕಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು :–ಭಾಷಣ ಮಾಡಿದರೆ ಹೇಗೆ, ಹೇಳಿದ್ದನ್ನೇ ಹೇಳುತ್ತಾ ಹೋದರೆ ಏನು ಪ್ರಯೋಜನ? ಪ್ರಶ್ನೆಯನ್ನು ನೇರವಾಗಿ ಕೇಳಿ.

ಶ್ರೀ ಕೆ. ಬಿ. ಮಲ್ಲಪ್ಪ.—ಮಂತ್ರಿಗಳವರಿಗೆ ಇಲ್ಲಿ ಅರ್ಥವಾಗಬೇಕಾದರೆ ಸ್ವಲ್ಪ ಎಕ್ಸ್‌ಪ್ಲೇನ್ ಮಾಡಿ ಹೇಳಬೇಕು ಅದಕ್ಕೋಸ್ಕರ ...

ಅಧ್ಯಕ್ಷರು.—ಅರ್ಥವಾಗುತ್ತದೆ, ಅರ್ಥವಾಗುವ ಹಾಗೆ ಹೇಳುವುದಕ್ಕೆ ಅವರ ಹತ್ತಿರ ಜನರಿದ್ದಾರೆ. ಆದುದರಿಂದ ನಿಮ್ಮ ಪ್ರಶ್ನೆಯನ್ನು ನೀವು ನೇರವಾಗಿ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಆದಕ್ಕೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ಕೂಡ ಕೇಳುತ್ತಿದ್ದೇವೆ. ಆದರೆ ... ಅವರಿಗೆ ಅರ್ಥವಾಗುವುದಿಲ್ಲ. ಅದಕ್ಕೆ ಇಷ್ಟೆಲ್ಲಾ ಹೇಳುತ್ತೇವೆಂದು ಹೇಳುವುದು

ಶ್ರೀ ಕೆ. ಬಿ. ಮಲ್ಲಪ್ಪ.—ಸ್ಥಳ ನೋಡಿದೇ ಸಮಸ್ಯೆಯೇ ಹೇಳಿದರೆ ಹೇಗೆ ಅರ್ಥವಾಗುತ್ತದೆ ಅದಕ್ಕೆ ಹೇಳಿದೆ.

ಶ್ರೀ ಬಿ. ಬಿ. ಚಿಪ್ಪಲಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರಿಹಾಬಿಲಿಟೇಷನ್ ಕಮಿಟಿಯ ಸದಸ್ಯರೂ ಇದ್ದಾರೆ. ಈ ವಿಷಯದ ಬಗ್ಗೆ ತುಂಗಭದ್ರ ಆಡಿನಿಸ್ಟ್ರೇಟರ್‌ರವರಿಗೆ ರೆಫರ್ ಮಾಡಿದ್ದೇವೆ. ಅವರು ಕೂಡ ತನಿಖೆ ಮಾಡಿ ಡೈ ನೇಚ್ ಮಾಡಿದರೆ ಅಷ್ಟಿ ಇಲ್ಲ ಎನ್ನತಕ್ಕ ಅಭಿಪ್ರಾಯವನ್ನು ಕೊಟ್ಟಿದ್ದಾರೆ ಆದುದರಿಂದ ಇದರ ಬಗ್ಗೆ ಸರ್ಕಾರದವರು ಇನ್ನೂ ಅವರನ್ನು ಅಲ್ಲಿಂದ ಶಿಫ್ಟ್ ಮಾಡಬೇಕೇ ಬಿಡಬೇಕೇ ಎನ್ನುವ ಬಗ್ಗೆ ನಿರ್ಧಾರವನ್ನು ಹೇಳುವುದಕ್ಕಾಗುವುದಿಲ್ಲ. ಬಹುಶಃ ಅಲ್ಲಿ ಶಿಫ್ಟ್ ಮಾಡಬೇಕೆಂದು ಜಾಗ ಸಿಗಲಿಕ್ಕೆ ಇಲ್ಲ. ಸಿಕ್ಕರೂ ಅಲ್ಲಿಯ ಜನರು ಒಪ್ಪಲಿಕ್ಕೆ ಇಲ್ಲ. ಮತ್ತು .. ಕಾ ಡಾ ವದರು ಕೂಡ ತನಿಖೆ ಮಾಡಿ ಡೈ ನೇಚ್ ಮಾಡಿದರೆ ಸೀಪೇಜ್ ವಾಟರ್‌ನ್ನು ತಡೆಗಟ್ಟುವುದಕ್ಕೆ ಸಾಧ್ಯ ಎನ್ನತಕ್ಕ ಟೆಕ್ನಿಕಲ್ ಓಪೀನಿಯನ್ ಕೊಟ್ಟಿರುತ್ತಾರೆ. ಮಾನ್ಯ ಸದಸ್ಯರೂ ಕೂಡ ತಮ್ಮ ಅಭಿಪ್ರಾಯವನ್ನು ನಮ್ಮ ಮುಂದಿಟ್ಟಿದ್ದಾರೆ. ಆದರೂ ಶಿಫ್ಟ್ ಮಾಡಲೇ ಬೇಕು ಎನ್ನತಕ್ಕ ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಟ್ಟರೆ ನಾವು ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕುವುದಿಲ್ಲ.

Pensionary benefits to the Ex-patels in the State

76 SRI D. T. RAMU (Channapatna) Will the Minister for Revenue be pleased to state.—

(a) the number of ex-patels in the State ;

(a) whether payment of salary and pension to the ex-patels is under consideration of Government ?